ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 15–09–2017

# ಪತ್ರಿಕಾ ಆಮಂತ್ರಣ

1. **ರಾಷ್ಟ್ರಪತಿಗಳ ಪದಕ ಪ್ರದಾನ ಸಮಾರಂಭ:**

**ರಾಷ್ಟ್ರಪತಿಗಳ ಪದಕ ಪ್ರದಾನ:**

ವಜುಭಾಯಿ ವಾಲ, ರಾಜ್ಯಪಾಲರು, ಕರ್ನಾಟಕ ಸರ್ಕಾರ

**ಅಧ್ಯಕ್ಷತೆ:**

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಮುಖ್ಯ ಅತಿಥಿ:**

ರಾಮಲಿಂಗಾರೆಡ್ಡಿ, ಗೃಹ ಮಂತ್ರಿಗಳು

ದಿನಾಂಕ: 16–09–2017, ಶನಿವಾರ ಸಮಯ: ಬೆಳಿಗ್ಗೆ 10.30 ಗಂಟೆಗೆ.

ಸ್ಥಳ: ರಾಜಭವನ, ಬೆಂಗಳೂರು.

2. **ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಮನೆಯಂಗಳದಲ್ಲಿ ಮಾತುಕತೆ:**

**ತಿಂಗಳ ಅತಿಥಿ:**

ಡಿ.ಕೆ. ಚೌಟ, ಉದ್ಯಮಿ, ಲೇಖಕ, ಕಲಾವಿದ ಹಾಗೂ ರಂಗಕರ್ಮಿ

ದಿನಾಂಕ: 16–09–2017, ಶನಿವಾರ ಸಮಯ: ಸಂಜೆ 4.00 ಗಂಟೆಗೆ.

ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

ಸಂಖ್ಯೆ 71/197

# ನವೆಂಬರ್ 1 ರಿಂದ ಏಕರೂಪದ ಆರೋಗ್ಯ ಭಾಗ್ಯ ಜಾರಿ – ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ನವೆಂಬರ್ 1 ರಿಂದ ಎಪಿಎಲ್ ಹಾಗೂ ಬಿಪಿಎಲ್ ಕಾರ್ಡುದಾರರಿಗೆ ಏಕರೂಪದ ಆರೋಗ್ಯ ಭಾಗ್ಯ ಯೋಜನೆ ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ನೆಫ್ರೋ-ಯುರಾಲಜಿ ಸಂಸ್ಥೆಯ ಅನೆಕ್ಸ್ ಕಟ್ಟಡ ಹಾಗೂ ಬಿ.ಎಂ.ಸಿ. ಆರ್. .ಐ. ನ ವಿವಿಧ ಕಟ್ಟಡಗಳ ಉದ್ಘಾಟನೆ ನೆರವೇರಿಸಿ ನಂತರ ಸಮಾರಂಭದಲ್ಲಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನರು ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ವಾರಕ್ಕೆರಡು ಬಾರಿ ಡಯಾಲಿಸಿಸ್ ಅವಶ್ಯಕತೆ ಇರುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚ ಹೆಚ್ಚಿರುವುದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚು ಸವಲತ್ತು ದೊರೆತರೆ ಇಲ್ಲಿಯೇ ಚಿಕಿತ್ಸೆ ಪಡೆಯುತ್ತಾರೆ ಎಂದರು.

ಬಡವರ ಆರೋಗ್ಯ ರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ರೋಗಿಗಳ ಪಾಲಿಗೆ ವೈದ್ಯರೇ ದೇವರು. ಒಳ್ಳೆಯ ಚಿಕಿತ್ಸೆ ನೀಡಿದರೆ ಪ್ರತಿನಿತ್ಯ ವೈದ್ಯರನ್ನು ನೆನೆಯುತ್ತಾರೆ. ಬಡವರ ಮಕ್ಕಳಿಗೂ ವೈದ್ಯಕೀಯ ಶಿಕ್ಷಣ ಸಿಗಬೇಕು. ಈ ವರ್ಷ 12 ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಮಂಜೂರಾತಿ ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ತೆರೆಯಲು ಸರ್ಕಾರ ಉದ್ದೇಶಿಸಿದೆ. ಸಾಮಾನ್ಯರಿಗೂ ಕೈಗೆಟುಕುವಂತೆ ಆರೋಗ್ಯ ರಕ್ಷಣೆಯಾಗಬೇಕು. ನಗರದ ಪ್ರಮುಖ್ಯ ಸರ್ಕಾರಿ ಆಸ್ಪತ್ರೆಗಳಾದ ವಾಣಿವಿಲಾಸ, ಕೆ.ಸಿ. ಜನರಲ್ ಆಸ್ಪತ್ರೆ ಮುಂತಾದವುಗಳಲ್ಲಿ ತಲಾ ಒಂದರಂತೆ ಇಂದಿರಾ ಕ್ಯಾಂಟೀನ್‌ಗಳನ್ನು ತೆರೆಯಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾದ ಶರಣ್‌ಪ್ರಕಾಶ್ ಪಾಟೀಲ್ ಮಾತನಾಡಿ, ಇಂದು ಮಿಂಟೋ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಮೆಟ್ರೋ ಸಹಯೋಗದಲ್ಲಿ ಗರ್ಭಿಣಿಯರ ತುರ್ತು ಚಿಕಿತ್ಸಾ ಘಟಕ, ನೆಫ್ರೋ ಯುರಾಲಜಿ ಕಟ್ಟಡಗಳು ಉದ್ಘಾಟನೆಗೊಂಡಿದೆ. ಬೆಂಗಳೂರು ವೈದ್ಯಕೀಯ ಕಾಲೇಜಿಗೆ 228 ಕೋಟಿ ರೂ. ಅನುದಾನ ನೀಡಲಾಗಿದೆ. ಇಂದು 78 ಕೋಟಿ ರೂ. ಗಳ ಕಾಮಗಾರಿ ಉದ್ಘಾಟನೆಗೊಂಡಿದೆ. ಮುಂದಿನ ವರ್ಷ ಕಲಬುರಗಿಯಲ್ಲೂ ವಿವಿಧ ಸವಲತ್ತುಗಳ ಆರೋಗ್ಯ ಸೇವೆಗಳು ಉದ್ಘಾಟನೆಗೊಳ್ಳಲಿವೆ. ಸಾಮಾನ್ಯ ಜನರಿಗೂ ಒಳ್ಳೆಯ ಆರೋಗ್ಯ ನೀಡುವ ನಿಟ್ಟಿನಲ್ಲಿ ಕಡಿಮೆ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲು ಸರ್ಕಾರ ಬದ್ಧವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯರಾದ ರಾಮಚಂದ್ರೇಗೌಡ, ಚಾಮರಾಜಪೇಟೆ ಶಾಸಕ ಜಮೀರ್ ಅಹಮ್ಮದ್ ಖಾನ್, ಚಾಮರಾಜಪೇಟೆ ಬಿ.ಬಿ.ಎಂ.ಪಿ ಸದಸ್ಯರಾದ ಕೋಕಿಲಾ ಚಂದ್ರಶೇಖರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ವಿ. ಮಂಜುಳಾ, ಬಿ.ಎಮ್.ಆರ್.ಸಿ.ಎಲ್. ವ್ಯವಸ್ಥಾಪಕ ನಿರ್ದೇಶಕರಾದ ಪ್ರದೀಪ್ ಸಿಂಗ್ ಕರೋಲಾ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಡಾ. ಎಸ್. ಸಚ್ಚಿದಾನಂದ, ನೆಫ್ರೋ-ಯುರಾಲಜಿ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ಎಮ್. ಶಿವಲಿಂಗಯ್ಯ ಉಪಸ್ಥಿತರಿದ್ದರು.

ಕೆಎನ್‌ಕೆ:ಜಿಪಿಆರ್.

ಸಂಖ್ಯೆ 72/198

## ಮುಂಬಡ್ತಿಯಲ್ಲಿ ಮೀಸಲಾತಿ ಅಂಕಿತಕ್ಕಾಗಿ ರಾಷ್ಟ್ರಪತಿಗಳಿಗೆ ಮನವಿ

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ನೀತಿ ಮುಂದುವರೆಸುವ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕುವಂತೆ ರಾಷ್ಟ್ರಪತಿಗಳಲ್ಲಿ ಮನವಿ ಮಾಡಲಾಗಿದೆ ಎಂದು ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷ ಕೆ. ಶಿವಮೂರ್ತಿ ಅವರು ತಿಳಿಸಿದರು.

ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರಿಗೆ ಮುಂಬಡ್ತಿ ಮೀಸಲಾತಿ

ಸಂವಿಧಾನದತ್ತ ಹಕ್ಕಾಗಿದ್ದು ಅದನ್ನು ಮುಂದುವರೆಸಲು ಸರ್ಕಾರ ಕಾರ್ಯೋನ್ಮುಖವಾಗಿದ್ದು ಅದಕ್ಕಾಗಿ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿಯನ್ನು ಸಹ ನೇಮಿಸಲಾಗಿತ್ತು. ಸಮಿತಿಯು ಮೀಸಲಾತಿ ನೀತಿಯನ್ನು ಸಮರ್ಥಿಸಿ ಇನ್ನೂ 32,000 ಕ್ಕೂ ಹೆಚ್ಚು ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇರುವುದನ್ನು ಖಚಿತಪಡಿಸಿದ್ದು, ಸದರಿ ವರದಿಯನ್ನು ಕ್ಯಾಬಿನೆಟ್‌ನಲ್ಲಿ ಪರಿಗಣಿಸಿ ಅಂಗೀಕರಿಸಿದ್ದರು ಆದೇಶ ಹೊರಡಿಸಿರುವುದಿಲ್ಲ ಎಂದರು.

ರಾಷ್ಟ್ರಪತಿಗಳಲ್ಲಿ ಒಟ್ಟು ಮೂರು ಮನವಿಗಳನ್ನು ಸಲ್ಲಿಸಲಾಗಿದ್ದು ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮುಂಬಡ್ತಿ ಮೀಸಲಾತಿ, ವಾಸಿಸುವವನೇ ಮನೆ ಒಡೆಯ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿಗಳಿಗೆ ಅಂಕಿತ ನೀಡಲು ರಾಜ್ಯಪಾಲರಿಗೆ ಆದೇಶ ನೀಡುವಂತೆ ಕೋರಲಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಹಾಗೂ ಸಮಿತಿಯ ಸದಸ್ಯ ವೀರಯ್ಯ ಅವರು ಮಾತನಾಡಿ ಮುಂಬಡ್ತಿ ವಿಚಾರದಲ್ಲಿ ರಾಜ್ಯಪಾಲರು ಸುಗ್ರೀವಾಜ್ಞೆಗೆ ಅಂಕಿತ ಹಾಕದಿದ್ದಲ್ಲಿ ಮುಖ್ಯಮಂತ್ರಿಗಳಿಗೆ ವಿಶೇಷ ಅಧಿವೇಶನ ಕರೆದು ಮುಂದಿನ ಕ್ರಮ ಕೈಗೊಳ್ಳಲು ಮನವಿ ಮಾಡಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ಸದಸ್ಯ ಹಾಗೂ ಶಾಸಕ ಕಳಲೆ ಕೇಶವಮೂರ್ತಿ ಹಾಗೂ ಸಮಿತಿಯ ಜಂಟಿ ನಿರ್ದೇಶಕ ಮಲ್ಲಪ್ಪ ಕಾಳೆ ಅವರು ಉಪಸ್ಥಿತರಿದ್ದರು.

ಜೆಡಿ:ಜಿಪಿಆರ್.

ಸಂಖ್ಯೆ 79/199

## ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ಕರ್ನಾಟಕ ಲೋಕಸೇವಾ ಆಯೋಗವು ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ “ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ” ಗ್ರೂಪ್ – ‘ಎ’ ವೃಂದದ 25 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ವ್ಯಕ್ತಿತ್ವ ಪರೀಕ್ಷೆಯನ್ನು ಸೆಪ್ಟೆಂಬರ್ 21 ರಂದು ಬಿ.ಎಸ್ಸಿ ಫಾರೆಸ್ಟ್ರಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಮತ್ತು ಸೆಪ್ಟೆಂಬರ್ 22 ರಂದು ಬಿ.ಎಸ್ಸಿ ಫಾರೆಸ್ಟ್ರಿ ವಿದ್ಯಾರ್ಹತೆ ಹೊಂದಿಲ್ಲದ ಅಭ್ಯರ್ಥಿಗಳಿಗೆ ನಡೆಸಲು ನಿಗದಿಪಡಿಸಿದೆ. ಅರ್ಹ ಅಭ್ಯರ್ಥಿಗಳಿಗೆ ಈಗಾಗಲೇ ಸೂಚನಾ ಪತ್ರಗಳನ್ನು ರವಾನಿಸಲಾಗಿದೆ.

ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸೂಚನಾ ಪತ್ರ ಸ್ವೀಕೃತವಾಗದಂತ ಅರ್ಹ ಅಭ್ಯರ್ಥಿಗಳು ಅವರಿಗೆ ಸಂಬಂಧಿಸಿದಂತೆ ಅಂತರ್ಜಾಲದಲ್ಲಿ ಪ್ರಕಟವಾಗಿರುವ ದಿನಾಂಕ ಮತ್ತು ವೇಳೆಗೆ ಆಧಾರ್ ಕಾರ್ಡ್‌ನೊಂದಿಗೆ ಹಾಜರಾಗುವಂತೆ ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

ಸಂಖ್ಯೆ 80/200

## "ತಳಿ ಅಭಿವೃದ್ಧಿ ಶಾಸ್ತ್ರ" ಇಪ್ಪತ್ತನೆಯ ಶತಮಾನದ ಹಸಿರುಕ್ರಾಂತಿಗೆ ಸಹಕಾರಿಯಾಗಿದೆ – ಡಾ. ಕುಲದೀಪ್ ಸಿಂಗ್

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ಸಾಂಪ್ರದಾಯಿಕ ವಿಧಾನ ಮತ್ತು ಪದ್ಧತಿಗಳ ಆಧಾರಿತ ತಳಿ ಅಭಿವೃದ್ಧಿ ಶಾಸ್ತ್ರವು ಹೊಸ ತಳಿಗಳ ಅಭಿವೃದ್ಧಿ ಫಲಶೃತಿಯಾಗಿದೆ. ಈ ತಳಿಗಳ 20 ನೆಯ ಶತಮಾನದ ಹಸಿರುಕ್ರಾಂತಿಗೆ ಬಹಳಷ್ಟು ಸಹಕಾರಿಯಾಗಿದೆ ಎಂದು ದೆಹಲಿಯ ರಾಷ್ಟ್ರೀಯ ಸಸ್ಯ ಅಭಿವೃದ್ಧಿ ಸಂಪನ್ಮೂಲಗಳ ಬ್ಯೂರೋ ನಿರ್ದೇಶಕ ಡಾ. ಕುಲದೀಪ್‌ಸಿಂಗ್ ತಿಳಿಸಿದರು.

ಇಂದು ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಆಯೋಜಿಸಿದ್ದ "ಮುಂದಿನ ಪೀಳಿಗೆಯ ತಳಿ ಅಭಿವೃದ್ಧಿ ಶಾಸ್ತ್ರದ ರಾಷ್ಟ್ರೀಯ ಸಮ್ಮೇಳನ" ಉದ್ಘಾಟನೆ ಮಾಡಿ ಮಾತನಾಡುತ್ತಾ 21 ನೇ ಶತಮಾನದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಕೊರತೆಯಿಂದಾಗಿ ಹಾಗೂ ಮಾನವನ ದಿನನಿತ್ಯದ ಚಟುವಟಿಕೆಗಳಿಂದ ಹವಾಮಾನ ವೈಪರೀತ್ಯದ ಪರಿಣಾಮವಾಗಿ ಹೊಸ ಜೈವಿಕ ಹಾಗೂ ಅಜೈವಿಕ ಒತ್ತಡಗಳಿಂದ ಬೆಳೆಗಳ ಇಳುವರಿ ಕ್ಷೀಣಿಸುತ್ತಿದೆ ಎಂದರು.

ಒತ್ತಡಗಳನ್ನು ಮೀರಿ ಬೆಳೆಗಳ ಇಳುವರಿ ಹೆಚ್ಚಿಸಲು ವಂಶವಾಹಿಶಾಸ್ತ್ರದ ವಿಧಾನಗಳ ಬಳಕೆ ಅನಿವಾರ್ಯ. ವಂಶಗ್ರಾಹಿಶಾಸ್ತ್ರ ವಿಧಾನಗಳು, ಅನುವಂಶೀಯ ಹಾಗೂ ಮೂಲ ಅನುವಂಶೀಯತೆಯ ವಿಭಿನ್ನತೆಗಳ ಮೂಲ ವ್ಯತ್ಯಾಸಗಳನ್ನು ಕಂಡುಹಿಡಿದು ಅವುಗಳನ್ನು ಡಿ.ಎನ್.ಎ ಗುರುತುಗಳ ಸಹಾಯದಿಂದ ರೈತರಿಗೆ, ಅಂತಿಮ ಬಳಕೆದಾರರಿಗೆ, ಸಂಸ್ಕರಣಾ

ಮತ್ತು ಕೈಗಾರಿಕೆಗಳಿಗೆ ಮುಖ್ಯವಾದ ಗುಣಲಕ್ಷಣಗಳನ್ನು ಬೆಳೆಗಳ ತಳಿಗಳಲ್ಲಿ ಸ್ಥಿರೀಕರಿಸಲು ಬಹುಸಹಕಾರಿಯಾಗಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಹೆಚ್. ಶಿವಣ್ಣನವರು ತಿಳಿಸಿದರು.

ಈ ಸಮ್ಮೇಳನದಲ್ಲಿ ಡಾ. ಶೈಲಜಾ ಹಿತ್ತಲಮನಿ, ಡಾ. ಎಸ್. ರಾಜೇಂದ್ರ ಪ್ರಸಾದ್, ಡಾ. ಎಂ. ಬೈರೇಗೌಡ, ಡಾ. ಕೆ. ಶಿವರಾಮು ಮತ್ತು ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮತ್ತು ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಕೆಎನ್‌ವಿ:ಜಿಪಿಆರ್.

ಸಂಖ್ಯೆ 81/201

## ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 17-09-2017ರ** ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ **ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ"** ಎಂಬ ಶೀರ್ಷಿಕೆಯಡಿ **ಶ್ರೀ ಎಂ. ನಾಗೇಂದ್ರ ಮತ್ತು ತಂಡ, ಮಳವಳ್ಳಿ ರವರಿಂದ ಜಾನಪದ ಸಂಗೀತ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2) ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ **ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ"** ಎಂಬ ಶೀರ್ಷಿಕೆಯಡಿ **ಶ್ರೀ ಮಹೇಶ್ ನಾಯ್ಕ್ ಮತ್ತು ತಂಡ, ಹಾಸನ ರವರಿಂದ ಜಾನಪದ ಗಾಯನ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

3) ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

4) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್,** ಬೆಂಗಳೂರು ಸಂಸ್ಥೆಯ ಸಹಯೋಗದೊಂದಿಗೆ **ಕು. ಸ್ಫೂರ್ತಿ.ಬಿ.ವಿ ರವರಿಂದ ಭರತ ನಾಟ್ಯಂ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ **ಶ್ರೀವಾಣಿ ವಿದ್ಯಾ ಕೇಂದ್ರ, ಮಾಗಡಿ ರಸ್ತೆ , ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕತಿಕ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

**II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ**

- ಬೆಳಿಗ್ಗೆ 8.00 ರಿಂದ ಬೆಳಿಗ್ಗೆ 12.00 ಗಂಟೆಯವರೆಗೆ, ಸೆಂಟ್ ಜೋಸೆಫ್ ಕಾಲೇಜ್, ಲಾಲ್ ಬಾಗ್ ರಸ್ತೆ, ಬೆಂಗಳೂರು ರವರಿಂದ ಮಾನಸಿಕ ಖಿನ್ನತೆ ಮತ್ತು ಆತ್ಮಹತ್ಯೆ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಸಂಖ್ಯೆ 82/202

## “ಒಪ್ಪಂದ ಆಧಾರದ” ಮೇಲೆ ಒದಗಿಸುವ ವಾಹನಗಳ ಪರಿಷ್ಕೃತ ದರ

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸಾರಿಗೆ ವಿಭಾಗದಿಂದ “ಒಪ್ಪಂದದ ಆಧಾರದ” ಮೇರೆಗೆ ಒದಗಿಸುವ ವಾಹನಗಳ ಪರಿಷ್ಕೃತ ದರವನ್ನು ಪ್ರಕಟಿಸಿದೆ.

51 ಆಸನಗಳ ಮಲ್ಟಿ ಆಕ್ಸೆಲ್ ವಾಹನ ಹಾಗೂ 47 ಆಸನಗಳ ಮಲ್ಟಿ ಆಕ್ಸೆಲ್ ವಾಹನಕ್ಕೆ ಪ್ರತಿ ಕಿ.ಮೀಗೆ ರೂ 65, (ಕನಿಷ್ಟ 300 ಕಿ.ಮೀ) 45 ಆಸನಗಳ ವೋಲ್ವೋ ವಾಹನಕ್ಕೆ ಪ್ರತಿ ಕಿ.ಮೀಗೆ 60 ರೂ. (ಕನಿಷ್ಟ 300 ಕಿ.ಮೀ), 39 ಆಸನಗಳ ಹವಾನಿಯಂತ್ರಿತ ಸುವಿಹಾರಿ ವಾಹನಕ್ಕೆ ಪ್ರತಿ ಕಿ.ಮೀ ರೂ. 50, (ಕನಿಷ್ಠ 250 ಕಿ.ಮೀ) 31 ಆಸನಗಳ ನಾನ್ ಎಸಿ ವಾಹನಕ್ಕೆ ಪ್ರತಿ ಕಿ.ಮೀ ಗೆ ರೂ 34 (ಕನಿಷ್ಟ 250 ಕಿ.ಮೀ) ಹಾಗೂ 18 ಆಸನ ಹಾಗೂ 15 ಆಸನಗಳ ಹವಾನಿಯಂತ್ರತ ವಾಹನಕ್ಕೆ ರೂ 25, (ಕನಿಷ್ಠ 200 ಕಿ.ಮೀ) ಆಗಿರುತ್ತದೆ.

ಸೂಚಿಸಿದ ಎಲ್ಲಾ ವಾಹನಗಳ ಪರಿಷ್ಕೃತ ದರಗಳ ಮೇಲೆ ಜಿಎಸ್‌ಟಿ ತೆರಿಗೆ ಶೇ 5 ರಷ್ಟು ಪ್ರತ್ಯೇಕವಾಗಿ ಪಾವತಿಸಬೇಕಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ www.kstdc.co ಮತ್ತು ದೂರವಾಣಿ ಸಂಖ್ಯೆ 8970650070, 080-43344334 ಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

ಸಂಖ್ಯೆ 83/203

## ಪ್ರವಾಸೋದ್ಯಮ ವಾಹನಗಳ ಹೊಸ ಪಿಕ್ ಅಪ್ ಪಾಯಿಂಟ್‌ಗಳು

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಯಶವಂತಪುರ ಬಸ್ ನಿಲ್ದಾಣಕ್ಕೆ ತನ್ನ ಕಾರ್ಪೋರೇಟ್ ಕಚೇರಿಯನ್ನು ಹಾಗೂ ಪ್ರವಾಸಿ ವಾಹನಗಳ ಪ್ರಾರಂಭವನ್ನು ಸ್ಥಳಾಂತರಿಸಿದೆ.

ಈ ಹಿನ್ನೆಲೆಯಲ್ಲಿ ಪ್ರವಾಸಿಗರಿಗೆ ಆಗಬಹುದಾದ ಸಣ್ಣಪುಟ್ಟ ತೊಂದರೆಗಳನ್ನು ನಿವಾರಿಸುವ ದೃಷ್ಟಿಯಿಂದ ಹಾಗೂ ಪ್ರವಾಸಿಗರಿಗೆ ತಮ್ಮ ವಾಸಸ್ಥಳದಿಂದ ನಿಗಮವು ಬಸ್ ನಿಲುಗಡೆಗಳಿಗೆ ಬಂದುಹೋಗಲು ಅನುಕೂಲವಾಗಲೆಂಬ ಸದುದ್ದೇಶದಿಂದ ಹೆಚ್ಚುವರಿ ಪಿಕ್‌ಆಪ್ ಪಾಯಿಂಟ್‌ಗಳನ್ನು ಗುರುತಿಸಲಾಗಿದೆ.

ಮೈಸೂರು ನಗರ ದರ್ಶನ, ಮೈಸೂರು ಊಟಿ ಪ್ರವಾಸ, ಮೈಸೂರು, ಊಟಿ, ಕೊಡೈಕೆನಲ್ ಮಡಿಕೇರಿ ನಾಗರಹೊಳೆ ಪ್ರವಾಸಕ್ಕಾಗಿ – ಯಶವಂತಪುರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಶ್ರೀ ಬಾಲಗಂಗಾಧರನಾಥ ಮೆಟ್ರೋ ಸ್ಟೇಷನ್, ವಿಜಯನಗರ ಮೆಟ್ರೋ, ದೀಪಾಂಜಲಿ ನಗರ ಮೆಟ್ರೋ, ಮೈಸೂರು ರಸ್ತೆ ಮೆಟ್ರೋ, ರಾಜರಾಜೇಶ್ವರಿ ನಗರ (ಗೋಪಾಲನ್ ಮಾಲ್), ಕೆಂಗೇರಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ. (ಪಿಕ್ ಪಾಯಿಂಟ್‌ಗಳು)

ಬೆಂಗಳೂರು ಪುಲ್ ಡೇ ನಗರ ದರ್ಶನ ಪ್ರವಾಸಕ್ಕಾಗಿ – ಯಶವಂತಪುರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಶ್ರೀ ಬಾಲಗಂಗಾಧರನಾಥ ಮೆಟ್ರೋ ಸ್ಟೇಷನ್, ವಿಜಯನಗರ ಮೆಟ್ರೋ, ದೀಪಾಂಜಲಿ ನಗರ ಮೆಟ್ರೋ, ಮೈಸೂರು ರಸ್ತೆ ಮೆಟ್ರೋ, ರಾಜರಾಜೇಶ್ವರಿ ನಗರ (ಪಿಕ್ ಪಾಯಿಂಟ್‌ಗಳು).

ಮನ್ನಾರ್ ಟೇಕಡಿ ಪ್ರವಾಸಕ್ಕಾಗಿ – ಯಶವಂತಪುರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಪಿ. ಕಾಳಿಂಗರಾವ್ ರೋಡ್/ಮಿಷನ್ ರಸ್ತೆ ಬಿ.ಎಂ.ಟಿ.ಸಿ. ನಿಲ್ದಾಣ, ಶಾಂತಿನಗರ ಡಬಲ್ ರೋಡ್‌ನಲ್ಲಿರುವ ಬಿ.ಎಂ.ಟಿ.ಸಿ. ಬಸ್ ಶೆಲ್ಟರ್, ಮಡಿವಾಳ ಬಸ್ ಶೆಲ್ಟರ್ (ಪಿಕ್ ಪಾಯಿಂಟ್‌ಗಳು).

ಬೆಸ್ಟ್ ಆಫ್ ಸೌತ್ ಇಂಡಿಯಾ ಪ್ರವಾಸಕ್ಕಾಗಿ – ಯಶವಂತಪುರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಪಿ. ಕಾಳಿಂಗರಾವ್ ರೋಡ್/ಮಿಷನ್ ರಸ್ತೆ ಬಿ.ಎಂ.ಟಿ.ಸಿ. ನಿಲ್ದಾಣ, ಶಾಂತಿನಗರ ಡಬಲ್ ರೋಡ್‌ನಲ್ಲಿರುವ ಬಿ.ಎಂ.ಟಿ.ಸಿ. ಬಸ್ ಶೆಲ್ಟರ್, ಮಡಿವಾಳ ಬಸ್ ಶೆಲ್ಟರ್ (ಪಿಕ್ ಪಾಯಿಂಟ್‌ಗಳು).

ಮಿನಿ ಸೌತ್ ಇಂಡಿಯಾ ಪ್ರವಾಸಕ್ಕಾಗಿ – ಯಶವಂತಪುರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಪಿ. ಕಾಳಿಂಗರಾವ್ ರೋಡ್/ಮಿಷನ್ ರಸ್ತೆ ಬಿ.ಎಂ.ಟಿ.ಸಿ. ನಿಲ್ದಾಣ, ಶಾಂತಿನಗರ

ಡಬಲ್ ರೋಡ್‌ನಲ್ಲಿರುವ ಬಿ.ಎಂ.ಟಿ.ಸಿ. ಬಸ್ ಶೆಲ್ಟರ್, ಮಡಿವಾಳ ಬಸ್ ಶೆಲ್ಟರ್ (ಪಿಕ್ ಪಾಯಿಂಟ್‌ಗಳು).

ತಿರುಪತಿ – ಮಂಗಾಪುರ ಪ್ರವಾಸಕ್ಕಾಗಿ – ಯಶವಂತಪುರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಪಿ. ಕಾಳಿಂಗರಾವ್ ರೋಡ್/ಮಿಷನ್ ರಸ್ತೆ ಬಿ.ಎಂ.ಟಿ.ಸಿ. ನಿಲ್ದಾಣ, ಶಾಂತಿನಗರ ಡಬಲ್ ರೋಡ್‌ನಲ್ಲಿರುವ ಬಿ.ಎಂ.ಟಿ.ಸಿ. ಬಸ್ ಶೆಲ್ಟರ್, ಹೋಟೆಲ್ ಮೌರ್ಯ ಗಾಂಧಿ ನಗರ, ಗುರುದ್ವಾರ ಹಲಸೂರು, ವಿವೇಕಾನಂದ ಮೆಟ್ರೋ ಸ್ಟೇಷನ್. ಎ.ಪಿ.ಜೆ. ಅಬ್ದುಲ್ ಕಲಂ ಬಸ್ ನಿಲ್ದಾಣ, ಐ.ಟಿ.ಐ. ಗೇಟ್ ಕೆ.ಆರ್. ಪುರಂ. ಹೊಸಕೋಟೆ ಪೊಲೀಸ್ ಸ್ಟೇಷನ್ (ಪಿಕ್ ಪಾಯಿಂಟ್‌ಗಳು).

ತಿರುಪತಿ ಕಾಳಹಸ್ತಿ ಮಂಗಾಪುರ ಪ್ರವಾಸಕ್ಕಾಗಿ – ಯಶವಂತಪುರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಪಿ. ಕಾಳಿಂಗರಾವ್ ರೋಡ್/ಮಿಷನ್ ರಸ್ತೆ ಬಿ.ಎಂ.ಟಿ.ಸಿ. ನಿಲ್ದಾಣ, ಶಾಂತಿನಗರ ಡಬಲ್ ರೋಡ್‌ನಲ್ಲಿರುವ ಬಿ.ಎಂ.ಟಿ.ಸಿ. ಬಸ್ ಶೆಲ್ಟರ್, ಹೋಟೆಲ್ ಮೌರ್ಯ ಗಾಂಧಿ ನಗರ, ಗುರುದ್ವಾರ ಹಲಸೂರು, ವಿವೇಕಾನಂದ ಮೆಟ್ರೋ ಸ್ಟೇಷನ್. ಎ.ಪಿ.ಜೆ. ಅಬ್ದುಲ್ ಕಲಂ ಬಸ್ ನಿಲ್ದಾಣ, ಐ.ಟಿ.ಐ. ಗೇಟ್ ಕೆ.ಆರ್. ಪುರಂ. ಹೊಸಕೋಟೆ ಪೊಲೀಸ್ ಸ್ಟೇಷನ್ ಹಾಗೂ ಮಲ್ಲೇಶ್ವರಂ ಪೊಲೀಸ್ ಸ್ಟೇಶನ್, ಕಸ್ತೂರಬಾ ರಸ್ತೆ (ಪಿಕ್ ಪಾಯಿಂಟ್‌ಗಳು) ಎಂದು ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

ಸಂಖ್ಯೆ 84/204

## 2016 ನೇ ಸಾಲಿಗೆ ಯುವ ಬರಹಗಾರರ ಚೊಚ್ಚಲ ಕೃತಿ ಪ್ರಕಟಿಸಲು ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 15 ( ಕರ್ನಾಟಕ ವಾರ್ತೆ) :

ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2016 ನೇ ಸಾಲಿನ ಯುವ ಬರಹಗಾರರ ಚೊಚ್ಚಲ ಕೃತಿಗಳನ್ನು ಪ್ರಕಟಿಸಲು ಪ್ರೋತ್ಸಾಹ ಧನ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿದಾರರು ಕನಿಷ್ಠ 18 ರಿಂದ 35 ವರ್ಷ ವಯೋಮಿತಿಯವರಾಗಿರಬೇಕು. ಸ್ವ-ವಿವರವುಳ್ಳ ಮನವಿಯೊಂದಿಗೆ ದೃಢೀಕೃತ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರದ ಪ್ರತಿ ಅಥವಾ ಅಧಿಕೃತವಾದ, ದೃಢೀಕರಿಸಲ್ಪಟ್ಟ ಜನ್ಮ ದಾಖಲಾತಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು. ಅಲ್ಲದೆ, ಪ್ರಸ್ತುತ ಸಲ್ಲಿಸಲ್ಪಡುತ್ತಿರುವ ಕೃತಿಯು ತಮ್ಮ ಚೊಚ್ಚಲ ಕೃತಿಯಾಗಿದ್ದು, ಎಲ್ಲಿಯೂ ಪ್ರಕಟವಾಗಿಲ್ಲವೆಂದು ಸ್ವಯಂ ದೃಢೀಕರಣ ಪತ್ರ ನೀಡಬೇಕು.

ಆಯ್ಕೆಗಾಗಿ ಸಲ್ಲಿಸುವ ಹಸ್ತಪ್ರತಿಯು ಡಿ.ಟಿ.ಪಿ ಮಾಡಿಸಿದಾಗ 1/8 ಡೆಮ್ಮಿ ಅಳತೆಯಲ್ಲಿ ಕನಿಷ್ಠ 60 ಪುಟಗಳಿರಬೇಕು. ಅನುವಾದ, ಪಠ್ಯ ಪುಸ್ತಕ ಹಾಗೂ ಬೇರಾವುದೇ ಪದವಿಗೆ ಸಿದ್ದಪಡಿಸಿದ ಪ್ರಬಂಧಗಳನ್ನು ಹೊರತುಪಡಿಸಿ ಕಥೆ, ಕಾದಂಬರಿ, ಕವನ, ನಾಟಕ, ವಿಮರ್ಶಾ ಲೇಖನ , ಪ್ರಬಂಧ ಮುಂತಾದ ಕನ್ನಡ ಸಾಹಿತ್ಯದ ಪ್ರಸಾರಗಳಿಗೆ ಸಂಬಂಧಿಸಿದಂತೆ ಹಸ್ತಪ್ರತಿ ಇರಬೇಕು.

ಕೃತಿಯ ಪಠ್ಯದಲ್ಲಿ ಯಾವುದೇ ಧರ್ಮ, ಜಾತಿ, ದೇವರು, ಕೋಮು, ವೃತ್ತಿ, ಸಮುದಾಯ, ಭಾಷೆ, ಆಚರಣೆ, ಪದ್ಧತಿ ಇತ್ಯಾದಿ ಸಂಗತಿಗಳಿಗೆ ಸಂಬಂಧಿಸಿದಂತೆ ಹಾಗೂ ರಾಷ್ಟ್ರೀಯ ನಾಯಕರುಗಳ ಕುರಿತಂತೆ ನೇರವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ಮನನೋಯಿಸುವಂತಹ ವಿಷಯವಾಗಲಿ ಇರಬಾರದು.

ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆತರುವಂತಹ ವಿಷಯ/ಸಂಗತಿಗಳು ಪ್ರಸ್ತಾಪವಾಗಿರಬಾರದು. ಪ್ರಾಧಿಕಾರಕ್ಕೆ ಸಲ್ಲಿಸಲ್ಪಡುವ ಅರ್ಜಿಗಳನ್ನು/ಹಸ್ತಪ್ರತಿಗಳನ್ನು ಹಿಂದಿರುಗಿಸಲಾಗುವುದಿಲ್ಲ. ಆದಕಾರಣ, ಹಸ್ತಪ್ರತಿಯ/ಡಿ.ಟಿ.ಪಿ. ಪ್ರತಿಯ ಎರಡನೇ ಪ್ರತಿಯನ್ನು ಸಲ್ಲಿಸಲು ತಿಳಿಸಿದೆ.

ಅರ್ಜಿಗಳನ್ನು ದಿನಾಂಕ 4-10-2017 ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002 ಅವರಿಗೆ ಕಳುಹಿಸಿಕೊಡಲು ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002 ದೂರವಾಣಿ ಸಂಖ್ಯೆ 080–22484516/22017704 ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.